**ದಿ: 05-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಎದುರುದಾರರ ಪರ ಶ್ರೀ ಹೆಚ್ ಎಲ್ ಸಿ ವಕೀಲರ ಪರವಾಗಿ ಶ್ರೀ ಡಿ ಟಿ ವಕೀಲರಿಂದ :**

ಈ ಕೇಸ್ ನಲ್ಲಿ ನಾನು ಅರ್ಜಿದಾರನಾಗಿದ್ದು, ಇಂದು ನನ್ನ ಮೌಖಿಕ ಸಾಕ್ಷದ ಬದಲು ಈ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದ ಎಲ್ಲಾ ವಿಷಯಗಳು ಸರಿ ಮತ್ತು ನಿಜ ಇರುತ್ತವೆ. ಅವುಗಳನ್ನು ತಿಳಿದುಕೊಂಡು ನಾನು ಸಹಿ ಹಾಕಿರುತ್ತೇನೆ.

**ಪಾಟೀಸವಾಲು: ಶ್ರೀ ಎಸ್ ಎಸ್ ಐ ಕ್ಯೂ ವಕೀಲರಿಂದ :-**

1. ನನಗೆ ಈಗ 56 ವರ್ಷ ವಯಸ್ಸಾಗಿರುತ್ತದೆ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯಗಳು ನಿಜ ಇರುತ್ತವೆ. ಈ ಅರ್ಜಿಯನ್ನು ಅರ್ಜಿದಾರರು ಯಾವ ಕಾರಣಕ್ಕೆ ಸಲ್ಲಿಸಿರುತ್ತಾರೆ ಎಂದು ನನಗೆ ಗೊತ್ತಿರುತ್ತದೆ. ಈ ಅರ್ಜಿಗೆ ಸಲ್ಲಿಸಿದ ಜವಾಬು ಅರ್ಜಿಯ ಬಗ್ಗೆ ನನಗೆ ಮಾಹಿತಿ ಇರುತ್ತದೆ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಜವಾಬಿನ ಅಂಶಗಳನ್ನು ನಮೂದು ಮಾಡಿದ್ದೇನೆ. ಅರ್ಜಿದಾರರು ಅಸಲು ದಾವಾ ನಂಬರ್ 46/2024 ರಲ್ಲಿ ಆಗಿರುವ ರಾಜಿ ಪತ್ರವನ್ನು ರದ್ದು ಮಾಡಬೇಕೆಂದು ಕೋರಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಅಸಲು ದಾವಾ ನಂಬರ್ 46/2024 ನ್ನು ಈ ನ್ಯಾಯಾಲಯದಲ್ಲಿ ಯಾರು ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿಯು ನಾನು ಸಲ್ಲಿಸಿರುತ್ತೇನೆ ಎನ್ನುತ್ತಾರೆ.

2. 1ನೇ ಎದುರುದಾರನು ನನಗೆ ಖಾಸ ತಮ್ಮನಾಗಬೇಕು. ನಿ ಪಿ 1 ರಂತೆ 1ನೇ ಎದುರುದಾರ ಅಸಲು ದಾವಾ ನಂಬರ್ 46/2024 ನ್ನು ಅರ್ಜಿದಾರರು ಮತ್ತು ನಿಮ್ಮ ಮತ್ತು 3ನೇ ಎದುರುದಾರರ ವಿರುದ್ದ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿಯು ನನಗೆ ದಾವಾ ನಂಬರ್ ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರಿದು ಮಹ್ಮದ ಖಾಸಿಂ ಇವರು ದಾವೆ ಸಲ್ಲಿಸಿರುವುದು ಒಪ್ಪಿಕೊಂಡಿರುತ್ತಾರೆ. ಸದರಿ ದಾವೆಯನ್ನು 1ನೇ ಎದುರುದಾರ ಮಲ್ಕಂದಿನ್ನಿ ಗ್ರಾಮದ ಜಮೀನು ಸ ನಂ 46/*/1, ವಿಸ್ತೀರ್ಣ 4-00 ಎಕರೆಗೆ ತಾನೇ ಮಾಲೀಕ ಮತ್ತು ಕಬ್ಜಾದಾರನೆಂದು ಅರ್ಜಿದಾರರು ನಿಮ್ಮ ಮತ್ತು 3ನೇ ಎದುರುದಾರರ ವಿರುದ್ದ ಸಲ್ಲಿಸಿರುತ್ತಾರೆ ಎಂದರೆ ಸರಿ.

3. ಅರ್ಜಿದಾರರು ನನಗೆ ಚಿಕ್ಕಮ್ಮ ಆಗಬೇಕು. ಅರ್ಜಿದಾರಳ ಗಂಡನ ಹೆಸರು ಮಹ್ಮದ ಸಾಬ, ಮಹ್ಮದಸಾಬ ಇವರು ನನಗೆ ಚಿಕ್ಕಪ್ಪನಾಗಬೇಕು. ನಿಮ್ಮ ಸಾಕ್ಷಿ ಪ್ರಮಾನ ಪತ್ರದ ಪ್ಯಾರಾ ನಂಬರ್ 4 ರಲ್ಲಿ ದಿನಾಂಕ: 23-02-2002 ರಂದು ದಾವಾ ಜಮೀನು ಮೌಖಿಕ ದಾನಪತ್ರದ ಮುಖೇನ ನನಗೆ ಕೊಟ್ಟಿದ್ದಾರೆ ಎಂದು ಬರೆದಿದ್ದಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ದಿನಾಂಕ: 23-02-2002 ರಂದು ಮೌಖಿಕ ದಾನ ಪತ್ರವನ್ನು ಅರ್ಜಿದಾರರು ನನಗೆ ಮಾಡಿಕೊಟ್ಟಿರುತ್ತಾರೆ. ಈ ವಿಷಯವನ್ನು ನಿಮ್ಮ ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿದ್ದೀರಾ ಎಂದರೆ ಸಾಕ್ಷಿಯು ಬರೆಸಿದ್ದೇನೆ ಎನ್ನುತ್ತಾರೆ. ಮೌಖಿಕ ದಾನ ಪತ್ರವನ್ನು

ಮಂಗಳವಾರದ ದಿನದಂದು ನನಗೆ ಮಾಡಿಕೊಟ್ಟಿರುತ್ತಾರೆ. ಮೌಖಿಕ ದಾನ ಪತ್ರ ಮಾಡುವ ಕಾಲಕ್ಕೆ ರಹೆಮಾನ್‌ಸಾಬ, ರಾಜವಲಿ, ಮಹ್ಮದ ಖಾಸಿಂಸಾಬ ಮತ್ತು ಲಾಲಬಿ ಇವರು ಹಾಜರು ಇದ್ದರು ಮತ್ತು ಕೊತ್ತದೊಡ್ಡಿ ಗ್ರಾಮದ ನಮ್ಮ ಮನೆಯಲ್ಲಿ ಮಾಡಿಕೊಟ್ಟಿರುತ್ತಾರೆ. ಕೊತ್ತದೊಡ್ಡಿ ಗ್ರಾಮದಲ್ಲಿ ನನ್ನ ತಂದೆ ಮಾಡಿದ ಒಂದೆ ಲೈನ್ ನಲ್ಲಿ ನನಗೆ ಮತ್ತು 1 ಮತ್ತು 3ನೇ ಎದುರುದಾರರಿಗೆ ಬೇರೆ ಬೇರೆ ಮನೆಗಳು ಇರುತ್ತವೆ. ನನ್ನ ಮನೆಯ ಅಳತೆ 15X30 ಅಡಿ ಇರುತ್ತದೆ. ಈ ಮನೆಯನ್ನು ನನ್ನ ತಂದೆ ಕಟ್ಟಿಸಿರುತ್ತಾರೆ. ನಾವು 3 ಜನ ಅಣ್ಣ ತಮ್ಮಂದಿರು ಭಾಗ ಮಾಡಿಕೊಂಡಿರುತ್ತೇವೆ ನನ್ನ ತಂದೆ ಒಕ್ಕಲುತನ ಮಾಡುತ್ತಿದ್ದರು. ನಮ್ಮ ಮನೆಯನ್ನು ಕಟ್ಟಿ 30-35 ವರ್ಷಗಳಾಗಿರುತ್ತದೆ.

4. ಅಸಲು ದಾವಾ ನಂಬರ 46/2024 ರಲ್ಲಿ ರಾಜಿ ಅರ್ಜಿಯ ಪ್ರಕಾರ ನನ್ನ ಭಾಗಕ್ಕೆ 1 ಎಕರೆ 20 ಗುಂಟೆ ಜಮೀನು ಬಂದಿರುತ್ತದೆ. 1ನೇ ಎದುರುದಾರನಿಗೆ 01 ಎಕರೆ 09 ಗುಂಟೆ ಮತ್ತು 3ನೇ ಎದುರುದಾರನಿಗೆ 01 ಎಕರೆ 05 ಗುಂಟೆ ಜಮೀನು ಬಂದಿರುತ್ತದೆ. ಅರ್ಜಿದಾರರಿಗೆ ಸರ್ವೆ ನಂಬರ್ 46 ರಲ್ಲಿ ಏನೂ ಹಿಸ್ಸಾ ಬಂದಿರುವುದಿಲ್ಲ, ಬೇರೆ ಜಮೀನು ಸರ್ವೆ ನಂಬರ್ ನಲ್ಲಿ ಆಕೆಗೆ ಭಾಗ ಬಂದಿರುತ್ತದೆ ಆ ಜಮೀನಿನ ಸರ್ವೆ ನಂಬರ್ ನನಗೆ ಗೊತ್ತಿಲ್ಲ.

( ಈ ಹಂತದಲ್ಲಿ ಎದುರುದಾರರ ಪರ ವಕೀಲರು ಈ ಅರ್ಜಿಗೆ ಸಂಬಂಧಪಡದೆ ಇರುವಂತಹ ಪಕ್ಷಗಾರರು ನ್ಯಾಯಾಲಯದಲ್ಲಿ ಆಸೀನರಾಗಿರುತ್ತಾರೆ ಅವರಿಂದ ಸಾಕ್ಷಿ ನುಡಿಯಲು ಅಡಚಣೆಯಾಗುತ್ತದೆ ಎಂದು ತಕರಾರು ಮಾಡಿರುತ್ತಾರೆ. ಈ ರೀತಿ ತಕರಾರು ಮಾಡಿದ್ದರಿಂದ ಅರ್ಜಿದಾರರ ಪರ ವಕೀಲರು ಅರ್ಜಿಗೆ ಸಂಬಂಧ ಪಡದೇ ಇರುವವರನ್ನು ನ್ಯಾಯಾಲಯದಿಂದ ಹೊರಗಡೆ ಕಳುಹಿಸುತ್ತೇನೆಂದು ಒಪ್ಪಿಕೊಂಡಿರುತ್ತಾರೆ. )

5. ನಿ ಪಿ 1 ವಾದ ಪತ್ರದ ಫ್ಯಾರಾ ನಂಬರ್ -8 ರಲ್ಲಿ ಮಹ್ಮದ ಖಾಸಿಂ ಇವರಿಗೆ ಮಲ್ಕಂದಿನ್ನಿ ಗ್ರಾಮದ ಜಮೀನು ಸ ನಂ 46/*/1, ವಿಸ್ತೀರ್ಣ 4-00 ಎಕರೆ ಜಮೀನನ್ನು ದಿನಾಂಕ: 23-2-2002 ರಂದು ಲಾಲಬೀ ಇವರ ಗಂಡ ಮಹ್ಮದಸಾಬ ಇವರು ಮೌಖಿಕ ದಾನ ಪತ್ರವನ್ನು ಬರೆದುಕೊಟ್ಟಿದ್ದಾರೆಂದು ನಮೂದು ಮಾಡಿದ್ದಾರೆ ಈ ವಿಷಯ ಸತ್ಯವಾಗಿದೆಯೇ ಅಥವಾ ಸುಳ್ಳು ಇದೆಯೋ ಎಂದರೆ ಸಾಕ್ಷಿಯು ಸುಳ್ಳಾಗಿದೆ ಎನ್ನುತ್ತಾರೆ. ಲಾಲಬಿ ಅಸಲು ದಾವಾ ಸಂಖ್ಯೆ 46/2024 ರ ರಾಜಿ ಡಿಕ್ರಿಯನ್ನು ರದ್ದುಪಡಿಸಿಬೇಕೆಂದು ಪರಿಹಾರವನ್ನು ಸತ್ಯದಿಂದ ಕೂಡಿದ್ದು ನೀವು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಅರ್ಜಿದಾರರು ಸಲ್ಲಿಸಿರುವ ಅರ್ಜಿಯ ಅಂಶಗಳ ಬಗ್ಗೆ ಮತ್ತು ದಾಖಲಾತಿಗಳ ಬಗ್ಗೆ ನನಗೆ ಮಾಹಿತಿ ಇದೆ. ನಿ ಪಿ 6 ರಂತೆ ಅರ್ಜಿದಾರರು ಮುಟೇಶನ್ ನಂಬರ್ 450/2002-03 ದಿನಾಂಕ: 24-09-2002 ರಂದು ಮಹ್ಮದಸಾಬ ಇವರಿಂದ ಮಹ್ಮದಖಾಸಿಂ ಇವರಿಗೆ ಮುಟೇಶನ್ ಬದಲಾವಣೆಯಾಗಿರುವುದು ಸರಿಯಾಗಿದೆಯೋ ತಪ್ಪಾಗಿದೆಯೋ ಎಂದರೆ ಸಾಕ್ಷಿಯು ಸರಿಯಾಗಿದೆ ಎನ್ನುತ್ತಾರೆ.

ಈ ಹಂತದಲ್ಲಿ ಮುಂದುವರಿದ ಪಾಟೀಸವಾಲಿಗೆ ಸಮಯವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ**/-**

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ